
ನಕ್ಷತ್ರಪಟ




ಧನಂಜಯ ಕುಂಬ್ಳೆ

ಕಲೆ: ಸಂತೋಷ್ ಸಸಿಹಿತ್ಲು


# ಪುಟಾಣಿ ತಮ್ಮಾ... ಕೇಳು ಇಲ್ಲಿ



ಡಾಕ್ಟರ್ ಮಾಮಾ ಡಾಕ್ಟರ್ ಮಾಮಾ
ಹೊಟ್ಟೆನೋವು ಇರುಳಿಂದ
ಪುಸ್ತಕ ತೆರೆದು ಓದಲು ಕುಳಿತರೆ
ತಲೇನೋವು ಒಳಗಿಂದ

ಪುಟಾಣಿ ತಮ್ಮಾ ಪುಟಾಣಿ ತಮ್ಮಾ
ಏನ್ ತಿಂದಿದ್ದೀಯಾ ನಿನ್ನೆ
ಪುಸ್ತಕ ತೆರೆದು ಓದುವ ಮೊದಲು
ಏನ್ ಮಾಡ್ತಿದ್ದೀಯಾ ನಿನ್ನೆ

ಮೊಬೈಲು ನೋಡುತ ಊಟವ ಮಾಡಿದೆ
ತಿಂದದ್ದೇನು ಗೊತ್ತಿಲ್ಲ
ಬೆಳಗಿನಿಂದಲೇ ಅದನೇ ನೋಡುತ
ಓದುವುದೇ ನೆನಪಿಲ್ಲ

ಮೊಬೈಲ್ ನೋಡುತ ಏನ ತಿಂದರೂ
ಕರಗದು ಚೂರೂ ಒಳಗೆ
ಅದನ್ನೇ ನೋಡುತ ಓದಲು ಕೂತರೆ
ಇಳಿಯದು ಚೂರು ತಲೆಯೊಳಗೆ

ಪುಟಾಣಿ ತಮ್ಮಾ ಮೊಬೈಲ್ ಬೆಳಕು
ಒಳ್ಳೆಯದಲ್ಲ ಕಣ್ಣಿಗೆ
ಅತಿಯೆನಿಸಿದರೆ ಅಮೃತವೂ ವಿಷ
ಬಿಟ್ಟುಬಿಡದರ ಮೆಲ್ಲಗೆ

ಕಥೆಗಳ ಪುಸ್ತಕ ಓದಿದ ಬಳಿಕ
ಜೊತೆಗುಣ್ಣುವ ಸುಖಕೆ ಸಮನಿಲ್ಲ
ಹಸಿರನು ನೋಡುತ ನಡೆದಾಡಿದರೆ
ಆರೋಗ್ಯಕೆ ಭಾಗ್ಯ ಬೇರಿಲ್ಲ


Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220,

© All rights reserved. Reproduction in whole or in part without permission is prohibited.
RNI No 17129/68